Reg No B G 155 31 - 1 - 1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

ಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಬ್ಯಾಂಕುಗಳ ಮೇಲೆ ಸಾಮಾಜಿಕ ಹತೋಟಿ ಜಾರಿ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ-ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಕಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಚ್ಚಿನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಮಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಮರಾಟ ವಿರುದ್ಧ

ಗುಲ್ಬರ್ಗ ಸ್ಥಳೀಯ ಇಂಜಿನೀರಿಂಗು ಕಾಲೇಜಿನ 500 ವಿದ್ಯಾರ್ಥಿಗಳು ತರಗತಿಗಳಿಗೆ ಗೈರುಹಾಜರಾಗಿ ಮರಾಟ ವಿರುದ್ಧ ಭಿತ್ತಿಪತ್ರ ಹಿಡಿದು ಸೋಸಣೆ ಮಾಡುತ್ತಾ, ರಸ್ತೆಗಳಲ್ಲಿ ಮರಾಟ ಪತ್ರಿಕೆಗಳನ್ನು ಸುಡುತ್ತಾ ವೆರವಣಿಗೆ ನಡೆಸಿದರು.

○

ಅಪಾರ ಅಕ್ರಮ ಪದಾರ್ಥಗಳ ವಶ

ಬೊಂಬಾಯಿ— ರಿಪಬ್ಲಿಕ್ ದಿನದಂದು ರೂ. 76 ಲಕ್ಷ ಬೆಲೆಯ ಅಕ್ರಮ ಸಾಗಾಣಿಕೆ ಪದಾರ್ಥಗಳನ್ನು ವಶಪಡಿಸಿಕೊಂಡ ಸಿಐಡಿ ಯವರು, ಮತ್ತೆ ರೂ. 4 ಲಕ್ಷ ಬೆಲೆಯವುಗಳನ್ನು ವಶಸ್ವಡಿಸಿಕೊಂಡರು

○

ಟೆಲಿವಿರ್ಜ್ ಇಲ್ಲ

ತಿರುಪತಿ— ಸ್ವಾಮಿಯನ್ನೂ ತಿರುಮಲೈ ದೇವಾಲಯನ ಚಟುವಟಿಕೆಗಳನ್ನೂ ಟೆಲಿವಿರ್ಜ ಮೂಲಕ ಪ್ರದರ್ಶಿಸುದಕ್ಕೆ ದೇವಾಲಯದ ಧರ್ಮದರ್ಶಿಗಳು ಅನುಮತಿ ಕೊಡಲಿಲ್ಲ.

●

ಅಲ್ಲೂ ಲಾಟರಿ

ಬೊಂಬಾಯಿ— ಮಹಾರಾಷ್ಟ್ರದ 2.5 ಲಕ್ಷ ಬಹುನೂನದ ಪ್ರಥನ ಲಾಟರಿಯು ಏಪ್ರಿಲ್ ಮೊದಲನೇ ವಾರ ನಡೆಯುವ ನಿರೀಕ್ಷೆ ಇದೆಯೆಂದು ಮುಖ್ಯಮಂತ್ರಿ ಶ್ರೀ ನಾಯಿಕ್ ಹೇಳಿದರು.

ಸ್ತುತ್ಯ ನಿರ್ಧಾರ

ಬೋಸ್ಟ್— ಮಿಲಿಟರಿ ರೀತಿಯಲ್ಲಿ ಭಾರತ ಮತ್ತು ಪಾಕಿಸ್ತಾನಗಳಲ್ಲಿ ಪರಿಸ್ಥಿತಿ ತೀವ್ರಗೊಳ್ಳುವ ಯಾವ ಕಾರ್ಯದಲ್ಲೂ ತಮ್ಮ ದೇಶ ಕೈಹಾಕುವುದಿಲ್ಲವೆಂದು ಪಶ್ಚಿಮ ಜರ್ಮನಿ ವಿದೇಶಾಂಗ ಮಂತ್ರಿಯರು ಹೇಳಿರುವರು.

ಭಾರತೀಯರ ಮೇಲಿನ ನಿರ್ಬಂಧ

ಜಕರ್ತ— ಇಂಡೋನೇಷಿಯದಲ್ಲಿರುವ 25000 ಭಾರತೀಯರ ಮೇಲೆ ಮಾಜಿ ಅಧ್ಯಕ್ಷ ಸುಕರ್ನೋ ವಿಧಿಸಿದ್ದ ಪ್ರತಿಬಂಧಕವನ್ನು ಈಗಿನ ಅಧ್ಯಕ್ಷ ಸುಹರ್ಟೋ ತೆಗೆದು ಹಾಕಿರುವರು.

ಕಾಲೇಜುಗಳಲ್ಲೇ ಪದವೀದಾನ

ಬೆಂಗಳೂರು— ವಿಶ್ವವಿದ್ಯಾಲಯದ ಆಡಳಿತದಲ್ಲಿ ಆಯಾ ಕಾಲೇಜುಗಳಲ್ಲೇ ಉತ್ತೀರ್ಣರಾದವರಿಗೆ ಪದವಿ ಕೊಡುವ ಏರ್ಪಾಡು ಮಾಡುವಂತೆ ಸಲಹೆಮಾಡಲಾಗಿದೆ.

ಬ್ಯಾಂಕುಗಳ ಮೇಲೆ ಹತೋಟಿ

ನವದೆಹಲಿ— ನಾಳೆಯಿಂದ ಬ್ಯಾಂಕುಗಳ ಮೇಲಿನ ಸಾಮಾಜಿಕ ಹತೋಟಿ ಜಾರಿಗೆ ಬರುವುದು - ಡೈರೆಕ್ಟರು ತಾವು ಹೊಂದಿರುವ ವಾಣಿಜ್ಯ ಸಂಸ್ಥೆಗಳಿಗೆ ಹಣ ಕೊಡುವದಕ್ಕಿದ – ಡೈರೆಕ್ಟರುಗಳ ಸಮಿತಿ ಪುನರ್ರಚನೆ ಮತ್ತಿತರ ವಿಷಯಗಳಲ್ಲೂ ರಿಜರ್ವ್ ಬ್ಯಾಂಕಿನ ಅಧಿಕಾರವಿದೆ – ರಿಜರ್ವ್ ನೀಡುವ ತಿಳುವಳಿಕೆಗೆ ವಿರುದ್ಧವಾಗಿ ನಡೆಯುವ ಬ್ಯಾಂಕುಗಳನ್ನು ಸರ್ಕಾರ ವಹಿಸಿಕೊಳ್ಳುವುದು ; ಮತ್ತು ಅಂತಹ ಬ್ಯಾಂಕುಗಳಿಗೆ ಪರಿಹಾರ ನೀಡಲಾಗುತ್ತೆ.

ಮಾಧ್ವ ಸಮ್ಮೇಳನ

ಉಡುಪಿ— ಧಾರ್ಮಿಕ ವಿಷಯಗಳಲ್ಲಿ ಸರಕ್ಕಾರ ಕೈಹಾಕುವದನ್ನು ಮಾಧ್ವ ಸಮ್ಮೇಳನ ಪ್ರತಿಭಟಿಸಿದೆ – ಶ್ರೀ ಮಧ್ವಾಚಾರ್ಯರ ಮೆಚ್ಚಿಕೆ ಪ್ರರ್ದಸಲು ಕನ್ನಡ ಕವಿಗಳ ಸಮ್ಮೇಳನದ ಏರ್ಪಾಡಿತು.

ಅರ್ಜಿ ವಜ

ನವದೆಹಲಿ— ಮಾಜಿ ರೈಲ್ವೆ ಮಂತ್ರಿ ಶ್ರೀ ಎಸ್ ಕೆ ಪಾಟೀಲರ ಚುನಾವಣಾ ಅರ್ಜಿಯನ್ನು ಸುಪ್ರೀಂ ಕೋರ್ಟು ವಜಾ ಮಾಡಿತು.

ಬರ್ಮಾದಿಂದ ಅಕ್ಕಿ

ನವದೆಹಲಿ— ಭಾರತವು ಬರ್ಮಾದಿಂದ 2 ಲಕ್ಷ ಟ್ ಅಕ್ಕಿ ಪಡೆಯಲು ಏರ್ಪಡಿಸಿದೆ.

ಅಣ್ಣಾ ದೊರೈ

ಮದರಾಸು— ಮುಖ್ಯಮಂತ್ರಿ ಅಣ್ಣಾ ದೊರೈರ ಸ್ಥಿತಿ ನಿನ್ನೆ ರಾತ್ರಿ ಆಶಾಜನಕವಾಗಿತ್ತು: ಇಂದು ಕಳವಳಾವಸ್ತೆಯಾಗಿದೆ

★ ಆಂಧ್ರದ ಪ್ರಮುಖ ಪಟ್ಟಣಗಳಲ್ಲಿ ಸೈನ್ಯದ ಉಸ್ತುವಾರಿ ಏರ್ಪಟ್ಟಿದೆ.

○ ಪಾಕಿಸ್ತಾನದ ೮ ಪ್ರಮುಖ ಪಟ್ಟಣಗಳಲ್ಲಿ ಸೈನ್ಯದ ಓಡಾಟ ಮತ್ತು ಕರ್ಫ್ಯೂ ಜಾರಿಯಲ್ಲಿದೆ.

ಇದೀಗ

ಮೈಸೂರು ಸರ್ಕಾರದ ರೇಷ್ಮೆ ನೇಯ್ಗೆ ಕಾರ್ಖಾನೆಯಿಂದ

ಕಣ್ಣು ತಣಿಸುವ ಅಪ್ರತಿಮ ಬಣ್ಣಗಳು

ಮನಮೋಹಕ ನಮೂನೆಯ

ವಿಶಿಷ್ಟ ನಯಗಾರಿಕೆಯ

ಸೀರೆ ಮತ್ತು ವಸ್ತ್ರಗಳು ಹೊರಬಂದಿವೆ.

★

ಮೈಸೂರು ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ,
ಮಾನಂದವಾಡಿ ರಸ್ತೆ, ಮೈಸೂರು-4

ವುಡ್‌ಲ್ಯಾಂಡ್ಸ್ ಶ್ರೀ ಜಯಪ್ರದ 3ನೇ ವಾರ

.... ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಆ ಮ್ಮ ನಾ ಮ್ಮ

ತಾರಾಗಣ— ಶಶಿ ಕಪೂರ್, ಶರ್ಮಿಳಾ ಟಾಗೋರ್, ಪ್ರೇಂ ಛೋಪ್ರ
ರಾಜೇಂದ್ರನಾಥ್, ಮದನಪುರಿ — ಸಂಗೀತ: ಕಲ್ಯಾಣ್‌ಜೀ ಆನಂದ್‌ಜೀ
[ದಿನ 3 ಪ್ರದರ್ಶನಗಳು]

ಅಪೆರಾ— 24-1-69 ರಿಂದ

— ಆತ್ಮಮೋಹಕ ತಮಿಳು ಚಿತ್ರ —

ಒ ಳ ವಿ ಳ ಕು

ಎಂ. ಜಿ. ರಾಮಚಂದ್ರನ್ ನಾಗೇಶ್ ಜಯಲಲಿತ

.... ದಿನವೆಹಿ 3 ಆಟಗಳು ....

ಕಾರ್ಪೊರೇಷನ್

ಬೆಂಗಳೂರು— ಇಲ್ಲಿಯ ಮುನಿಸಿಪಲ್ ಕಾರ್ಪೊರೇಷನ್ ರದ್ದಿನ ಅವಧಿ ತಗ್ಗಿಸಿ ಚುನಾವಣೆ ನಡೆಸಲು ಮತ್ತು ಕಾರ್ಪೊರೇಷನ್ ಅವಧಿಯನ್ನು 3 ರಿಂದ 4 ವರ್ಷಕ್ಕೆ ಹೆಚ್ಚಿಸುವ ಮಸೂದೆ ನಿನ್ನೆ ವಿಧಾನ ಪರಿಷತ್ತಿನಲ್ಲಿ ಮಂಜೂರಾಯಿತು.

★

ರಿಪಬ್ಲಿಕ್ ಡೇ

ಮೈಸೂರು— ಸ್ಥಳೀಯ ಮುಸ್ಲಿಂ ಯುವಕ ಸಂಘವು ಗಣರಾಜ್ಯವನ್ನು ಆಚರಿಸಿತು. ಮುಖ್ಯ ಅತಿಥಿಯಾಗಿದ್ದ ಶ್ರೀ ಹೆಚ್. ಡಿ. ತುಳಸೀದಾಸ್‌ರು— ಯುವಕರು ದೇಶಭಕ್ತರಾಗಿರಲೂ, ತಮ್ಮ ಕಾರ್ಯಗಳಲ್ಲಿ ಉತ್ಸಾಹಿಗಳಾಗಿರಲೂ ಬೋಧಿಸಿದರು.

★

ಪ್ರತಿಭಟನಾ ಮೆರವಣಿಗೆ

ತಿರುಪತಿ— ತೆಲುಂಗಾಣಾ ಪ್ರತ್ಯೇಕತೆ ಕೇಳ್ಗೆ ಪ್ರತಿಭಟಿಸಿ, ಪೋಲೀಸರ ಆಪ್ಪಣೆ ಪಡೆದು ಇಲ್ಲಿಯ ಕಾಲೇಜುಗಳ 5000 ವಿದ್ಯಾರ್ಥಿಗಳು ಶಾಂತತೆಯಿಂದ ಮೆರವಣಿಗೆ ನಡೆಸಿದರು.

ಕಡಪ— ಸುಮಾರು 1800 ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು.

ಶಾಸನ ಸಭೆ

ಬೆಂಗಳೂರು— ಶಾಸನಸಭೆಯು ಬುಧವಾರ ಸಮಾಪ್ತಿಗೊಂಡಿತು – ಮತ್ತೆ ಫೆಬ್ರವರಿಮೂರನೇ ಅಥವಾ ನಾಲ್ಕನೇ ವಾರದಲ್ಲಿ ಸೇರುವುದು.

★

ಅನ್ನ ಸತ್ಯಾಗ್ರಹ

ಆನಂತಪುರ— ಆರು ಮಂದಿ ವಿದ್ಯಾರ್ಥಿಗಳು ಸರಕಾರಿ ಕಚೇರಿ ಹತ್ತಿರ ಉಪವಾಸ ಪ್ರಾರಂಭಿಸಿರುವರು.

★

ನಂದೀ ಬೆಟ್ಟದ ಚೆನ್ನತ್ವ ಹೆಚ್ಚಿದೆ

ನಂದೀ ಬೆಟ್ಟದ ನಿಸರ್ಗ ರಮಣೀಯತೆಗೆ ಮಾರುಹೋಗದೆ ರಸಿಕರಿಲ್ಲ. ಇದು ಬೇಸಿಗೆಯ ವಿಶ್ರಾಂತಿ ಧಾಮ. ಇದಕ್ಕೆ ಮೈಸೂರಿನ ರೋಮಾಂಚಕಾರಿ ಇತಿಹಾಸದಲ್ಲಿ ಅಗ್ರಸ್ಥಾನವಿದೆ. ಇಂತಹ ಜಿಲುವಿನ ಬೆಟ್ಟಕ್ಕೆ ವಿಜ್ಞಾನ ತನ್ನ ತೊಡುಗೆಯನ್ನು ತೊಡಿಸಲು ಇದೀಗ ಉಪಕ್ರಮಿಸಿದೆ. ಇದರ ಮೇಲೆ ಇತ್ತೀಚೆಗೆ ನಿರ್ಮಿಸಲಾದ 105 ಉತ್ತರದ ಗೋಪುರ ಇದರ ಚೆನ್ನತ್ವವನ್ನು ಇನ್ನಷ್ಟು ಹೆಚ್ಚಿಸಿದೆ. ಇದು ಮೈಕ್ರೋ ಫೋನು ಜಾಲದ ಸ್ಥಾಪನೆಗೆಉಪಯೋಗಿಸಿಕೊಳ್ಳಲಾಗುವುದು.

Help The Gorakshana

ಆಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ಎಲ್ಲ ವಿಧ ಆಯುರ್ವೇದ ಔಷಧಗಳಿಗೂ ನಮ್ಮಲ್ಲಿ ದೊರೆಯುತ್ತವೆ

Quality Printing — Neat Binding

Lakshminarasimha Press

Sivarampet, Mysore

S H A K T I
S U D H A

A Superb Tonic

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H. H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah. Sri Madhav Shenoi, Sri Opera Talkies, Padmabhushana Dr. M. C. Modi; Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore: 4.

Protect the Cow

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4